ಓ.ಎಸ್. ನಂಃ 191/2024
ಪಿ.ಡಬ್ಲ್ಯೂ-1 (ಬಸವ್ವ)

ದಿನಾಂಕ: 06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎನ್.ಎಸ್.ಜಿ. ಪ್ರತಿವಾದಿ 1 ರಿಂದ 5 ರವರ ಪರ ವಕೀಲರಿಂದಃ**

ನಾನು 8ನೇ ತರಗತಿವರೆಗು ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತವರು ಊರು ಮೇಲ್ಮಟ್ಟಿ. ನನ್ನ ತಾಯಿಯ ಹೆಸರು ನಾಗವ್ವ. ನಾನು ಈ ಸಾಕ್ಷಿಯನ್ನು ನನ್ನ ಹಾಗೂ ವಾದಿ 1, 3 ರಿಂದ 6 ರವರ ಪರ ನುಡಿಯುತ್ತಿದ್ದೇನೆ. 1, 3 ರಿಂದ 6ನೇ ವಾದಿಯರು ಅವರ ಪರವಾಗಿ ನನಗೆ ಸಾಕ್ಷಿ ನುಡಿಯಲು ಅಧಿಕಾರ ಪತ್ರವನ್ನು ಬರೆದುಕೊಟ್ಟಿಲ್ಲ.

2. ನಾವು ಈ ದಾವೆಯನ್ನು ಎರಡು ಜಮೀನುಗಳ ಮೇಲೆ ಸಲ್ಲಿಸಿದ್ದೇವೆ. ದಾವಾ ಆಸ್ತಿಗಳ ನಿರ್ಧಿಷ್ಟವಾದ ಚಕ್ಕಬಂದಿ ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂ.179 ರ ಪೂರ್ವಕ್ಕೆ - ಅಪ್ಪಾಜಿ ಕೋರೆ, ಪಶ್ಚಿಮಕ್ಕೆ- ಕೆಂಚಪ್ಪ ಕಳಸನ್ನವರ ಇವರ ಜಮೀನು, ಪಶ್ಚಿಮಕ್ಕೆ- ಬಸವಣ್ಣಿ ನಿಂಗಪ್ಪ ಕಳಸನ್ನವರ ಇವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಉತ್ತರಕ್ಕೆ- ಬಸಪ್ಪ ನಿಂಗಪ್ಪ ಕಳಸನ್ನವರ ಇವರ ಜಮೀನು ಎಂದರೆ ಸರಿಯಲ್ಲ. ಸಾಕ್ಷಿದಾರರು ಉತ್ತರಕ್ಕೆ ಕೆಂಚಪ್ಪ ಕಳಸನ್ನವರ ಇವರ ಜಮೀನು ಎಂದು ಹೇಳುತ್ತಾರೆ. ದಕ್ಷಿಣಕ್ಕೆ- ಕೆಂಚಪ್ಪ ಕಳಸನ್ನವರ ಇವರ ಜಮೀನು ಬರುತ್ತದೆ.

3. ಸರ್ವೆ ನಂ.181 ರ ಪೂರ್ವಕ್ಕೆ- ಬಸವಣ್ಣಿ ಕೋರೆ, ಪಶ್ಚಿಮಕ್ಕೆ - ಕೆಂಚಪ್ಪ ಕಳಸನ್ನವರ ಇವರ ಜಮೀನು, ಉತ್ತರಕ್ಕೆ - ಕಳಸನ್ನವರ ಇವರ ಜಮೀನು, ದಕ್ಷಿಣಕ್ಕೆ- ರಸ್ತೆ.

4. ದಾವಾ ಮನೆಯ ನಂಬರ 84 ಇರುತ್ತದೆ. ಸದರಿ ಮನೆಯ ಪೂರ್ವಕ್ಕೆ- ಹೋಳಗಿ ಇವರ ಆಸ್ತಿ, ಪಶ್ಚಿಮಕ್ಕೆ- ಸುಣಧೋಳಿ ಇವರ ಆಸ್ತಿ, ಉತ್ತರಕ್ಕೆ- ಬೀರನಗಡ್ಡಿ ಇವರ ಆಸ್ತಿ, ದಕ್ಷಿಣಕ್ಕೆ- ಕನಸಗೇರಿ ಇವರ ಆಸ್ತಿ. ಸದರಿ ಮನೆ ಆಸ್ತಿಯ ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ.

5. ನಮ್ಮ ಈ ದಾವೆಗೆ 1ನೇ ಪ್ರತಿವಾದಿ ತಮ್ಮ ಲಿಖಿತ ಹೇಳಿಕೆಯಲ್ಲಿ ಏನು ಹೇಳಿದ್ದಾರೆ ಎಂದು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ನಾವು ದಾವಾ ಆಸ್ತಿಗಳಿಗೆ ತೋರಿಸಿದ ಚಕ್ಕಬಂದಿ ತಪ್ಪು ಇದ್ದುದ್ದರಿಂದ ಅವರು ದವಾ ಆಸ್ತಿಗಳ ಸರಿಯಾದ ಚಕ್ಕಬಂದಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಚಕ್ಕಬಂದಿ ಸೂಚಿಸುವ ದಾಖಲೆಗಳನ್ನು ಹಾಜರ ಮಾಡಿಲ್ಲ. ದಾವಾ ಆಸ್ತಿಗಳಿಗೆ ನಾವು ತೋರಿಸಿರುವ ಚಕ್ಕಬಂದಿಗಳು ತಪ್ಪು ಇರುತ್ತವೆ ಎಂದರೆ ಸರಿಯಲ್ಲ.

6. ನಮ್ಮ ತಾಯಿ ನಾಗವ್ವ ಇವರು ಅಂದಾಜು 19 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. 1ನೇ ವಾದಿಯ ಗಂಡ ಬಸಲಿಂಗಪ್ಪ ಇವರು 2019 ರಲ್ಲಿ

ತೀರಿಕೊಂಡಿರುತ್ತಾರೆ. ನನ್ನ ಯಜಮಾನರು 2010ರಲ್ಲಿ ತೀರಿಕೊಂಡಿರುತ್ತಾರೆ. 1ನೇ ಪ್ರತಿವಾದಿಯ ಗಂಡ ಭೀಮಪ್ಪ 2010 ರಲ್ಲಿ ಮೃತಪಟ್ಟಿರುತ್ತಾರೆ.

7. ಬಸಲಿಂಗಪ್ಪ ಇವರ ಜೀವಿತ ಕಾಲದಲ್ಲಿ ಅಂದರೆ 2008 ರಲ್ಲಿ ಅವರ ಮಕ್ಕಳಾದ ಭೀಮಪ್ಪ ಮತ್ತು ಲಕ್ಕಪ್ಪ ಬಾಯಿ-ಮಾತಿನಲ್ಲಿ ವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಾಟ್ನಿಯಲ್ಲಿ ಜಮೀನುಗಳಲ್ಲಿ ಪೂರ್ವ ದಿಕ್ಕಿನ ಅರ್ಧ ಪಾಲು ಭೀಮಪ್ಪ ಇವರ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಪಶ್ಚಿಮ ದಿಕ್ಕಿನ ಅರ್ಧ ಪಾಲು ನನ್ನ ಯಜಮಾನರಾದ ಲಕ್ಕಪ್ಪ ಇವರ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ.

8. ಜಿ.ಪಿ.ಸಿ ನಂ.777 ರ ಮನೆ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಮುಂದುವರೆದು ಸದರಿ ಮನೆ ತಮ್ಮ ಸ್ವಂತ ಮನೆ ಎಂದು ಹೇಳುತ್ತಾರೆ. ಸದರಿ ಮನೆ ಆಸ್ತಿ ನನ್ನ ಸ್ವಂತದ ಆಸ್ತಿ ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸುತ್ತೇನೆ. ಸದರಿ ಮನೆ ನನಗೆ ಪಂಚಾಯತಿಯಿಂದ ಮಂಜೂರಾಗಿರುತ್ತದೆ. ಜಮೀನು ಇಲ್ಲದವರಿಗೆ ಮನೆ ಇಲ್ಲದವರಿಗೆ, ಬಡವರಿಗೆ ಪಂಚಾಯತಿಯಿಂದ ಮನೆ ಮಂಜೂರು ಮಾಡುತ್ತಾರೆ ಎಂದರೆ ಸರಿಯಲ್ಲ. ಈ ದಾವೆಗೆ ಅನುಕೂಲ ಆಗಲಿ ಎಂದು ಹೇಳಿ ಜಿ.ಪಿ.ಸಿ. ನಂ.777 ರ ಮನೆ ನನ್ನ ಸ್ವಂತ ಆಸ್ತಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. 2008 ರಲ್ಲಿ ವಾಟ್ನಿ ಆದಾಗ ಜಿ.ಪಿ.ಸಿ. ನಂ.94/1 1ನೇ ಪ್ರತಿವಾದಿಯ ಗಂಡನ ಪಾಲಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಜಿ.ಪಿ.ಸಿ. ನಂ.777 ನನ್ನ ಯಜಮಾನರ ಪಾಲಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ನನ್ನ ಯಜಮಾನರ ಹೆಸರು ಕಡಿಮೆ ಮಾಡಿ ನನ್ನ ಹೆಸರು ದಾಖಲ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

10. ನನ್ನ ಹಾಗೂ ನನ್ನ ಮಗಳ ಪಡಿತರ ಚೀಟಿ ಬೇರೆ ಬೇರೆ ಇದೆ ಎಂದರೆ ಸರಿ. ಅದೇ ರೀತಿ 1ನೇ ಪ್ರತಿವಾದಿಯ ಕುಟುಂಬದ ಪಡಿತರ ಚೀಟಿಯು ಸಹ ಬೇರೆ ಇದೆ ಎಂದರೆ ಸರಿ. ಜಿ.ಪಿ.ಸಿ.ನಂ.777 ರ ಮನೆ ಆಸ್ತಿಯಲ್ಲಿ ನಾವು ವಾಸ ಇದ್ದೇವೆ ಎಂದರೆ ಸರಿ. ಅವರ ಪಾಲಿಗೆ ಬಂದ ಆಸ್ತಿಯಲ್ಲಿ 1ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿ.

11. 2008 ರಲ್ಲಿ ವಾಟ್ನಿ ಆದ ನಂತರ ಭೀಮಪ್ಪ ಇವರ ಪಾಲಿಗೆ ಬಂದ ಆಸ್ತಿಗಳನ್ನು ಭೀಮಪ್ಪ ಹಾಗೂ ಅವರ ವಾರಸುದಾರರು, ಲಕ್ಕಪ್ಪ ಇವರ ಪಾಲಿಗೆ ಬಂದ ಆಸ್ತಿಗಳನ್ನು ಲಕ್ಕಪ್ಪ ಹಾಗೂ ಅವರ ವಾರಸುದಾರರು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. 2008 ರಲ್ಲಿಯೆ ನಮ್ಮ ಮತ್ತು ಪ್ರತಿವಾದಿಯರ ನಡುವೆ ವಾಟ್ನಿ ಆಗಿದ್ದರೂ ಸಹ ವಾಟ್ನಿ ಆಗಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ